# ಕಾವ್ಯ ಹುಸಿಯಾಗದಿರಲಿ

ಆದಿಕಾವ್ಯವಾದ ರಾಮಾಯಣದ ಅಯೋಧ್ಯಾಕಾಂಡವನ್ನು ರಾಮಾಯಣದ ಹೃದಯ ಎನ್ನಬಹುದು. ಹೃದಯವು ನೋಯುವ ಜಾಗ. ನೋಯಬಲ್ಲ ಜಾಗ. ಎರಡು ಕ್ರೌಂಚ ಹಕ್ಕಿಗಳು ಸರಸದಲ್ಲಿದ್ದವು; ಆಗ ಬೇಡನೋರ್ವ ಗಂಡು ಹಕ್ಕಿಗೆ ಬಾಣ ಹೊಡೆದು ಕೆಡವಿದ; ಹಾಗೆ ತನ್ನ ಗಂಡನ್ನು ಕಳೆದುಕೊಂಡು ಮಮ್ಮಲ ಮರುಗುತ್ತಿದ್ದ ಕ್ರೌಂಚ ಹೆಣ್ಣಿನ ಅಳಲಿಗೆ ವಾಲ್ಮೀಕಿಯ ಹೃದಯ ಮಿಡಿಯಿತು. ತನ್ನೊಳಗೆ ಕರುಣಾರಸದ ಸಾಕ್ಷಾತ್ಕಾರವನ್ನು ವಾಲ್ಮೀಕಿ ಅನುಭವಿಸಿದ. ಇಂಥ ವಾಲ್ಮೀಕಿಗೆ ಹೃದಯದ ಮಹಿಮೆ ಎಂದರೆ ನೋವಿನ ಮಹಿಮೆ ಎಲ್ಲರಿಗಿಂತ ಹೆಚ್ಚು ತಿಳಿದಿರಬೇಕು! ನೋಯದೆ ಕಾವ್ಯವಿಲ್ಲ!

ಈ ಕ್ರೌಂಚ ಪ್ರಸಂಗಕ್ಕಿಂತಲೂ ಸ್ವಲ್ಪ ಮುನ್ನ ನಾರದ ಮತ್ತು ವಾಲ್ಮೀಕಿಗಳ ನಡುವೆ ಮಾತುಕತೆ ನಡೆದಿತ್ತು. ವಿಶಾಲವಾದ ಲೋಕಾನುಭವವುಳ್ಳ ನಾರದನೊಡನೆ ವಾಲ್ಮೀಕಿ ತನ್ನನ್ನು ಕಾಡುತ್ತಿದ್ದ ಪ್ರಶ್ನೆಯೊಂದನ್ನು ಕೇಳಿದ್ದ: ಯಾರು ಈ ಲೋಕದಲ್ಲಿ– ಸಾಂಪ್ರತ ಲೋಕದಲ್ಲಿ– ನಿಜವಾಗಿ ಗುಣಶಾಲಿ? – ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್? ಇದು ಪ್ರಶ್ನೆಯ ಪ್ರಾರಂಭ. ಮೊದಲ ಮಾತು. ಇದು ಎಲ್ಲ ಕಾಲದ ಪ್ರಶ್ನೆಯೂ ಹೌದು!

ಯಾರು ಗುಣಶಾಲಿ ಎಂದುಕೊಳ್ಳುವಾಗ ಈ ಗುಣವಾನ್ ಎನ್ನುವ ಪದಕ್ಕೆ ನಿಜವಾದ ಅರ್ಥ ವಾಲ್ಮೀಕಿಯ ಮನಸ್ಸಿನಲ್ಲಿದ್ದ ಅರ್ಥ ಏನಾಗಿರಬಹುದು? ಲೋಕದ ದುಃಖಕ್ಕೆ ನಿಜವಾಗಿ ನೋಯಬಲ್ಲವನು ಯಾರು? ಎನ್ನುವುದೇ ವಾಲ್ಮೀಕಿಯ ಅರ್ಥವಾಗಿರಬೇಕು. ಏಕೆಂದರೆ ಸ್ವಯಂ ವಾಲ್ಮೀಕಿ ಲೋಕವನ್ನು ನೋಡಿ ತಲ್ಲಣಗೊಂಡಿದ್ದ. ಲೋಕದ ದುಃಖವನ್ನು ತನ್ನೆದೆಯಲ್ಲಿ ಹೊತ್ತುಕೊಂಡಿದ್ದ. ವಾಲ್ಮೀಕಿಯ ಪ್ರಶ್ನೆ ವಾಲ್ಮೀಕಿ ಹೇಗಿದ್ದ ಎನ್ನುವುದನ್ನು ಮೊದಲಾಗಿ ಸೂಚಿಸುತ್ತದೆ. ಆದುದರಿಂದಲೇ ಕಾಳಿದಾಸ, ತನ್ನ ರಘುವಂಶದಲ್ಲಿ, ಉತ್ತರಕಾಂಡದ ಕಥೆಯನ್ನು ಹೇಳುವ ಸಂದರ್ಭದಲ್ಲಿ ರಾಮನಿಂದ ಪರಿತ್ಯಕ್ತಳಾಗಿ ಸೀತೆ ಕಾಡಿನಲ್ಲಿ ಅಳಲುತ್ತಿದ್ದಾಗ, ಆ ಅಳಲು ವಾಲ್ಮೀಕಿಗೆ ಕೇಳಿಸಿತು, ಹಕ್ಕಿಯ ಅಳಲನ್ನು ಕೇಳಿಸಿಕೊಂಡವನಿಗೆ ಹೆಣ್ಣಿನ ಅಳಲು ಕೇಳದೆ ಇರುತ್ತದೆಯೆ? ಎಂದು ಮಾರ್ಮಿಕವಾಗಿ ವರ್ಣಿಸುತ್ತಾನೆ. ರುದಿತಾನುಸಾರೀ ಕವಿ: ಎನ್ನುವುದು ಕಾಳಿದಾಸನ ಮಾತು. ಅಳಲಿನ ಜಾಡು ಹಿಡಿದು ನಡೆವವನು ಕವಿ!

ಹಕ್ಕಿಯ ಅಳಲಿಗೆ ವಾಲ್ಮೀಕಿ ಸ್ಪಂದಿಸಿದ ರೀತಿಯಂತೂ ರಾಮಾಯಣವು ವಾಲ್ಮೀಕಿಯ ಅನುಭವವೆನ್ನುವಷ್ಟು ಮಟ್ಟಿಗೆ ಕಾವ್ಯವನ್ನು ಅಧಿಕೃತಗೊಳಿಸಿತು. ಅಂದಾಗ ಕವಿ ಬೇರೆಯಲ್ಲ ಕಾವ್ಯಬೇರೆಯಲ್ಲ ಎಂದಂತಾಯಿತು. ರಾಮನನ್ನು ವರ್ಣಿಸುವಾಗ ಒಂದು ಮುಖ್ಯವಾದ ಮಾತು ಹೇಳುತ್ತಾನೆ ವಾಲ್ಮೀಕಿ. ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತ: – ಪ್ರಜೆಗಳ ಸಂಕಟವನ್ನು ಕಂಡಾಗ ತೀವ್ರವಾದ ದುಃಖಕ್ಕೆ ತಾನು ಒಳಗಾಗುವನು ಎಂಬ ಮಾತು. ಇದು ಅನುಭವ ಮುಖಿಯಾದ ವರ್ಣನೆ. ಅಂದರೆ ಪ್ರಜೆಗಳ ದುಃಖವನ್ನು ಪರಿಹಾರ ಮಾಡುತ್ತಾನೆ. ಎನ್ನುತ್ತಿದ್ದರೆ ಅದು ಬಹಿರ್ಮುಖವಾದ ವರ್ಣನೆ. ತಾನೇ ದುಃಖಕ್ಕೆ ಈಡಾಗುತ್ತಾನೆ ಎನ್ನುವುದು ಅಂತರ್ಮುಖಿಯಾದ ವರ್ಣನೆ. ಈ ವರ್ಣನೆ ಕವಿಯ ಸ್ವಾನುಭವದಿಂದಲೇ ಬಂದದ್ದು.

ವಾಲ್ಮೀಕಿ ಒಂದು ದಿಗ್ಭ್ರಮೆಯಲ್ಲಿದ್ದ. ನಾರದನಲ್ಲಿ ತಾನು ಕೇಳಿದ ಪ್ರಶ್ನೆ, ಇದಕ್ಕೆ ಸಮಾಧಾನವೆಂಬಂತೆ ನಾರದ ಹೇಳಿದ ರಾಮನಕಥೆ ವಾಲ್ಮೀಕಿಯ ಅಂತರಂಗದಲ್ಲಿ ಅಲೆಗಳನ್ನೆಬ್ಬಿಸುತ್ತಿದ್ದವು. ಆ ಮೇಲೆ ತನ್ನ ಕಣ್ಣ ಮುಂದೆಯೇ ಕ್ರೌಂಚದ ದುರಂತ ನಡೆಯಿತು. ಇದನ್ನು ಕಂಡು ಕರುಣ ರಸೋದ್ವಿಗ್ನನಾದ ತನ್ನಿಂದ ಉದ್ಗಾರವೊಂದು ಹೊಮ್ಮಿ ಬಂತು. ಶ್ಲೋಕರೂಪವಾಗಿ ಶೋಕವೇ ಪ್ರಕಟವಾಯಿತು! ಮತ್ತೊಮ್ಮೆ ಆ ಶ್ಲೋಕವನ್ನು ನೆನೆದರೆ, ಅದರಲ್ಲಿ ಒಂದು ಛಂದೋಗುಣ, ಒಂದು ತಾಂತ್ರಿಕ ಸಮರ್ಪಕತೆ ಕಂಡು ಬಂದವು. ಅಚ್ಚರಿಯಾಯಿತು!

ಜೀವದ ದುಃಖಕ್ಕೆ ಒಂದು ಛಂದೋರೂಪವೂ ಇರುವುದೆ? ಯಾಕೆ ಇರಬಾರದು? ಆಳದ ಶೋಕವು ಹಾಡಾಗಿ ಹರಿಯುವುದೆ? ಯಾಕೆ ಹರಿಯಬಾರದು? ಹಾಡಿನಲ್ಲಿರುವ ಸ್ವರ–ಲಯಗಳು ದುಃಖಕ್ಕಾಗಿ ದುಡಿಯುವವೆ? ದುಡಿಯಬಾರದೆ? ಕಾವ್ಯದ ಎಲ್ಲ ಪರಿಕರಗಳೂ ರುದಿತಾನುಸಾರಿಯಾಗಿರುವವೆ? ಯಾಕಿರಬಾರದು? ಉತ್ಕಟವಾದ ಭಾವವೊಂದರ ಕಡೆಗೆ ಪ್ರಕೃತಿಯ ಎಲ್ಲ ಶಕ್ತಿಗಳೂ ಸೆಳೆಯಲ್ಪಡುವವೆ? ಆ ಭಾವದ ಜೊತೆ ತಮ್ಮನ್ನು ತಾವು ಜೋಡಿಸಿಕೊಳ್ಳುವವೆ? ಆಗ ಏನಾಗುವುದು? ಎಲ್ಲವೂ ಕೃತಾರ್ಥವಾಗುವವೆ? ದುಃಖವೂ ಕೃತಾರ್ಥವಾಗುವುದೆ? ಹಾಗೆಂದರೇನು? ಎಲ್ಲವನ್ನೂ ತನ್ನತ್ತ ಸೆಳೆಯಬಲ್ಲ ತನ್ನ ಶಕ್ತಿ ತನಗೆ ತಿಳಿಯದೇ ಪ್ರಕಟವಾಗಿರುವುದನ್ನು ಕಂಡಾಗ ಒಂದು ಸಾರ್ಥಕ ಭಾವ ಉಂಟಾಗುವುದೆ? ಎಲ್ಲರನ್ನೂ ತನ್ನತ್ತ ಸೆಳೆಯಬೇಕೆನ್ನುವ ಅಹಂಕಾರದ ಸ್ವಭಾವಕ್ಕಿಂತ ಇದು ಗುಣಾತ್ಮಕವಾಗಿ ಬೇರೆಯಾದುದೆ? ದು:ಖವು ಸೆಳೆಯಿತು ಎನ್ನುವುದಕ್ಕಿಂತ, ದು:ಖದ ಬಳಿಗೆ ಎಲ್ಲವೂ ಪ್ರೀತಿ ಕರುಣೆಗಳಿಂದ ಬಂದವು ಎಂದುಕೊಂಡರೆ, ಕರುಣೆಯು ಎಲ್ಲಕಡೆ ವಿ–ಕಿರಣವಾಯಿತು ಎನ್ನುವುದೇ ಸರಿಯಲ್ಲವೆ? ಭಾವವು ರಸವಾಗುವುದೆಂದರೆ ಇದೇ ಏನು!

ವಾಲ್ಮೀಕಿ ದಿಗ್ಭ್ರಮೆಯಲ್ಲಿದ್ದ. ಸೃಷ್ಟಿಶೀಲ ಒತ್ತಡಕ್ಕೆ ಒಳಗಾಗಿದ್ದ. ಆಗ ಬ್ರಹ್ಮದೇವ ಬಂದನಂತೆ. ಸರಸ್ವತಿಯ ಪತಿಯಲ್ಲವೆ! ಬ್ರಹ್ಮ ಬಂದು ಮಾತೆಂದರೆ ಸಂಬಂಧವಿಲ್ಲದಂತೆ ಕಾಣುವ ಅನುಭವಗಳ ನಡುವೆ ಸಂಬಂಧವನ್ನು ಕಲ್ಪಿಸುವ ತಂತು. ಅನುಭವಗಳ ಒಳಹೆಣಿಗೆಯನ್ನು ಸೂಚಿಸುವ ಗುಪ್ತಗಾಮಿನಿ. ಹಕ್ಕಿಯ ಅಳಲಿಗೂ ನಿನ್ನ ಉದ್ವಿಗ್ನ ವಾಕ್ಯಕ್ಕೂ ಇರುವ ಸಂಬಂಧವನ್ನು ನೆನೆ. ನಿನ್ನ ಮಾತು ಕಾವ್ಯದಲ್ಲಿ ಎಂದೂ ಹುಸಿಯಾಗುವುದಿಲ್ಲ ಎಂದನಂತೆ.

■ ತೋಷ

## ಮಾತೇ ಮುತ್ತು

★ ನೀವು ಇವತ್ತು ಮಾಡುವ ಕೆಲಸ ನಿಮ್ಮ ನಾಳೆಗಳನ್ನು ಸುಧಾರಿಸಬಹುದು.

–ರಾಲ್ಫ್ ಮಾರ್ಸನ್

★ ಯೋಚನೆಗಳಿದ್ದರೆ ಅದು ವಿನಾಶ. ಯೋಚನೆಗಳೇ ಇಲ್ಲದಿದ್ದರೆ ಅದು ಧ್ಯಾನ.

–ರಮಣ ಮಹರ್ಷಿ

★ ಜೀವನಪೂರ್ತಿ ಕೊಲೆಗೈಯುತ್ತಾ ಬಂದರೂ ನಿಮ್ಮ ವೈರಿಗಳು ಇಲ್ಲವಾಗುವುದಿಲ್ಲ. ಆದರೆ ನಿಮ್ಮ ಸಿಟ್ಟನ್ನು ಇಲ್ಲವಾಗಿಸಿದರೆ ನೈಜ ವೈರಿ ಸತ್ತಂತೆಯೇ.

–ನಾಗಾರ್ಜುನ

★ ಒಂದೇ ಒಂದು ಗುಲಾಬಿ ನನ್ನ ಹೂತೋಟವನ್ನು ಮಾಡಬಲ್ಲದು. ಒಬ್ಬನೇ ಒಬ್ಬ ಗೆಳೆಯ ನನ್ನ ಜಗತ್ತನ್ನು ಸುಂದರವಾಗಿಸಬಲ್ಲ.

–ಲಿಯೊ ಬುಸ್ಕಾಗ್ಲಿಯ

★ ನಾವೆಲ್ಲರೂ ಪ್ರಸಿದ್ಧ ವ್ಯಕ್ತಿಗಳಾಗಬೇಕೆಂದು ಬಯಸುತ್ತೇವೆ. ಏನಾದರೂ ಆಗಬೇಕೆಂದು ಹೀಗೆ ಬಯಸಿದ ಕ್ಷಣದಿಂದಲೇ ನಾವು ಮುಕ್ತತೆಯನ್ನು ಕಳೆದುಕೊಳ್ಳುತ್ತೇವೆ.

–ಜಿಡ್ಡು ಕೃಷ್ಣಮೂರ್ತಿ

★ ಗುರಿ ತಲುಪಲು ಸಾಧ್ಯವಿಲ್ಲ ಎಂದು ಗೊತ್ತಾದರೆ, ಗುರಿಯನ್ನು ಬದಲಾಯಿಸಬೇಡಿ. ನಡೆಯುವ ದಾರಿಯನ್ನು ಬದಲಾಯಿಸಿ.

–ಕನ್‌ಫ್ಯೂಶಿಯಸ್

★ ಜೀವನವೆಂದರೆ ನೈಸರ್ಗಿಕ ಮತ್ತು ಆಕಸ್ಮಿಕ ಬದಲಾವಣೆಗಳ ಸರಣಿ. ಅದನ್ನು ತಡೆಯಬೇಡಿ. ತಡೆದರೆ ದುಃಖ ಹೆಚ್ಚುತ್ತದೆ.

–ಲಾವೊ ತ್ಸು

★ ಗೆಳೆತನದ ಅರ್ಥ ತಿಳಿಯದವರು ಜೀವನದಲ್ಲಿ ಏನೂ ಕಲಿತಿಲ್ಲ ಎಂದೇ ಅರ್ಥ.

–ಬಾಕ್ಸರ್ ಮುಹಮ್ಮದ್ ಅಲಿ

★ ಮರಳಿ ಗಳಿಸಲು ನಿನ್ನೆ ನಮ್ಮದಲ್ಲ. ಆದರೆ ಜಯ ಗಳಿಸಲು ಅಥವಾ ಸೋಲಲು ನಾಳೆ ನಮ್ಮದೇ.

–ಲಿಂಡನ್ ಜಾನ್ಸನ್

★ ಇಡೀ ಜಗತ್ತೇ ನಿಮ್ಮಿಂದ ದೂರ ಹೋದಾಗ ಬಳಿಗೆ ಬರುವವನೇ ನಿಜವಾದ ಸ್ನೇಹಿತ.

–ವಾಲ್ಟರ್ ವಿನ್‌ಶೆಲ್

★ ವಿಶ್ವಾಸವನ್ನು ಗೌರವಿಸಿ. ಆದರೆ ಅನುಮಾನ ಎನ್ನುವುದು ಯಾವತ್ತೂ ನಿಮಗೆ ಶಿಕ್ಷಣ ನೀಡುತ್ತದೆ.

–ವಿಲಿಯಂ ಮಿಜ್ನರ್